# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.1005–2018** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಾಲಯ್ಯ<br>ಕೊಳ್ಳೇಗಾಲ |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 03–02–2025.** |

**ಮುಂದುವರೆದ ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಎ.ಪಿ.ಎಂ.ಬಿ   ವಕೀಲರಿಂದಃ**

ನಾನು ಹೇಳುವಂತೆ ಪಿರ್ಯಾದಿದಾರರಿಗೆ ಚೆಕ್ಕನ್ನು ನೀಡಿದೆನು ಎಂದು ಹೇಳುವ ದಿನಾಂಕದಂದು ನನ್ನ ಬಳಿ ಸಾಕಷ್ಟು ಹಣ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ–1 ರ ಬಾಬ್ತು ಖಾತೆಯಲ್ಲಿ ಹಣ ಇತ್ತು ಎಂದು ತೋರಿಸಲು ನನ್ನ ಪಾಸ್ ಪುಸ್ತಕವನ್ನಾಗಲಿ, ಇತರೇ ದಾಖಲೆಗಳನ್ನಾಗಲಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಮಹದೇವು ರವರು 1 ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಪ್ರಕರಣದಲ್ಲಿ ನಾನು ಎಸ್.ಬಿ.ಐ ಬ್ಯಾಂಕಿಗೆ ಸಂಬಂಧಿಸಿದ ಪಾಸ್‌ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು ಎಂದರೆ ಸರಿ. ನಾನು ಮನೆಯನ್ನು 2017 ನೇ ಇಸವಿ ಮಾರ್ಚ್ ಮಾಹೆಯಲ್ಲಿ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನಾನು 2017 ನೇ ಇಸವಿ ಜೂನ್ ಮಾಹೆಯಲ್ಲಿ

ಪಿರ್ಯಾದಿದಾರರಿಂದ ಸಾಲವಾಗಿ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಂದ ಪಡೆದ ಹಣದ ಮರುಪಾವತಿಗಾಗಿ ಅನಂತರದಲ್ಲಿ ನಿಪಿ-1 ಅನ್ನು ನೀಡಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಚೆಕ್ಕನ್ನು ಪಿರ್ಯಾದಿದಾರರಿಗೆ ನೀಡಿರುವುದು ನಿಜ, ಆದರೆ ಸದರಿ ಚೆಕ್ ಬಾಬ್ತು ಹಣವನ್ನು ನಾನು 2016 ರ ಡಿಸೆಂಬರಿನಲ್ಲಿಯೇ ಮರುಪಾವತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿದಾರರಿಗೆ ರೂ.20,000/- ಗಳನ್ನು ಮರುಪಾವತಿ ಮಾಡಿದ್ದು, ಅದರ ಬಾಬ್ತು ನಾನು ಯಾವುದೇ ಹಿಂಬರಹವನ್ನು ಬರೆಸಿಕೊಂಡಿರುವುದಿಲ್ಲ. ನಾನು ಪಿರ್ಯಾದಿದಾರರಿಂದ ಸಾಲವನ್ನು ಪಡೆದಿದ್ದರೂ ಸಹ 1 ನೇ ಹೆಚ್ಚುವರಿ ನ್ಯಾಯಾಲಯದಲ್ಲಿದ್ದ ಪ್ರಕರಣವು ನನ್ನ ಪರವಾಗಿ ತೀರ್ಪು ಬಂದಿರುವುದರಿಂದ ಈ ಪ್ರಕಣದಲ್ಲಿಯೂ ಸಹ ನಾನು ಸಾಲವನ್ನು ಮರುಪಾವತಿ ಮಾಡುವ ಭಾಧ್ಯತೆಯಿಂದ ತಪ್ಪಿಸಿಕೊಳ್ಳಲು ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**